<u>**ಅಸಲು ದಾವಾ. ನಂಃ 116/2023**</u>

**ಡಿ.ಡಬ್ಲೂ - 1 ಈಶಣ್ಣ ಕುಂಬಾರ**

<u>**ಸಾಕ್ಷಿಯನ್ನು ದಿನಾಂಕಃ 24.07.2025 ರಂದು ಸಾಕ್ಷಿ ಕರೆಯಿಸಿ, ಪ್ರಮಾಣೀಕರಿಸಲಾಯಿತು.**</u>
<u>**ಪಾಟೀ ಸವಾಲುಃ ವಾದಿಯ ಪರ ಶ್ರೀ ಎಮ್. ಎಚ್. ಕೆ ವಕೀಲರಿಂದಃ**</u>

1. ವಾದಿಗಳು ನನ್ನ ತಂಗಿಯರು ಇರುತ್ತಾರೆ. 1 ನೇ ಪ್ರತಿವಾದಿ ನನ್ನ ತಾಯಿ, 2 ನೇ ಪ್ರತಿವಾದಿ ನನ್ನ ಅಣ್ಣ ಇರುತ್ತಾರೆ. ದಾವಾ ಸ್ವತ್ತುಗಳು ನಮ್ಮ ಮನೆತನದ ಆಸ್ತಿಗಳು ಎಂದರೆ ಸರಿ. ದಾವಾ ಶೆಡ್ಯೂಲ್ 1 ಆಸ್ತಿಯು ನಮ್ಮ ಕುಟುಂಬಕ್ಕೆ ನನ್ನ ತಾಯಿಯು ಕುಂಬಾರಿಕೆ ಮಾಡುತ್ತಿದ್ದು ಅವರು ಕೂಡಿಟ್ಟ ಹಣದಿಂದ ಖರೀದಿಸಿರುತ್ತಾರೆ. ಸದರಿ ಆಸ್ತಿಗೆ ಸಂಬಂಧಪಟ್ಟಂತೆ ನನ್ನ ತಾಯಿಯ ಹೆಸರಿಗೆ ಕ್ರಯದ ಕರಾರು ಆಗಿತ್ತು, ನಂತರ ತಾಯಿಯ ಹೆಸರಿಗೆ ಖರೀದಿ ಪತ್ರ ಬೇಡ ಎಂದು ನನ್ನ ತಂದೆಯ ಹೆಸರಿನಲ್ಲಿ ಖರೀದಿಯಾಗಿರುತ್ತದೆ.

2. ಶೆಡ್ಯೂಲ್ 2 ಆಸ್ತಿಯು ಈರಪ್ಪ ಬಾಬಣ್ಣ ಕಲಾಲರವರಿಗೆ ಸೇರಿದ ಆಸ್ತಿಯಾಗಿರುತ್ತದೆ. ನಮ್ಮ ಕುಟುಂಬಕ್ಕೆ ನನ್ನ ತಾಯಿಯು ಕುಂಬಾರಿಕೆ ಮಾಡುತ್ತಿದ್ದು ಅವರು ಕೂಡಿಟ್ಟ ಹಣದಿಂದ ಖರೀದಿಸಿರುತ್ತಾರೆ. ಸದರಿ ಆಸ್ತಿಗೆ ಸಂಬಂಧಪಟ್ಟಂತೆ ನನ್ನ ತಾಯಿಯ ಹೆಸರಿಗೆ ಕ್ರಯದ ಕರಾರು ಆಗಿತ್ತು, ನಂತರ ತಾಯಿಯ ಹೆಸರಿಗೆ ಖರೀದಿ ಪತ್ರ ಬೇಡ ಎಂದು ನನ್ನ ತಂದೆಯ ಹೆಸರಿನಲ್ಲಿ ಖರೀದಿಯಾಗಿರುತ್ತದೆ. ಶೆಡ್ಯೂಲ್ -3 ಆಸ್ತಿಯು ಸಹ ಎಲ್ಲರೂ ಕೂಡಿ ದುಡಿದ ಹಣದಿಂದ ಖರೀದಿಸಿರುವ ಆಸ್ತಿಯಾಗಿರುತ್ತದೆ. ಶೆಡ್ಯೂಲ್ -4 ಮನೆಯನ್ನು ಕಳಕಪ್ಪ ಕುಂಬಾರವರಿಂದ ನನ್ನ ತಾಯಿಯ ಹೆಸರಿಗೆ ಖರೀದಿ ಮಾಡಲಾಗಿತ್ತು, ನಂತರ ಆ ಆಸ್ತಿಯನ್ನು ನನ್ನ ತಂದೆಗೆ ಬಿಟ್ಟುಕೊಟ್ಟಿರುತ್ತಾರೆ.

3. 4 ನೇ ಪ್ರತಿವಾದಿಯ ಹೆಸರಿಗೆ ದಾವಾ ಐಟಂ ನಂಬರ 1 ಮತ್ತು 2 ಆಸ್ತಿಗಳನ್ನು ಸಾಲದ ಭದ್ರತೆಗಾಗಿ ತೊರಾಯಕಿ ಪತ್ರವನ್ನು ಬರೆದುಕೊಟ್ಟಿರುತ್ತೇನೆ. 4 ನೇ ಪ್ರತಿವಾದಿಯ ಹೆಸರಿಗೆ ನನ್ನ ತಂದೆಯು ಬರೆದುಕೊಟ್ಟಿರುವ ಖರೀದಿ ಪತ್ರವೆಂದು 4 ನೇ ಪ್ರತಿವಾದಿಯು ಹೇಳುತ್ತಾರೆ ಎಂದರೆ ಸುಳ್ಳು. ಈ ಆಸ್ತಿಗಳನ್ನು ಮಾರಾಟ ಮಾಡಲು ನಮ್ಮ ಮನೆತನದಲ್ಲಿ ಯಾವುದೇ ಅಡಚಣೆ ಇರುವುದಿಲ್ಲ. ದಾವಾ ಆಸ್ತಿಗಳಲ್ಲಿ ವಾದಿಗಳಿಗೂ ಸಹ ಹಿಸ್ಸೆ ಇರುತ್ತದೆ ಎಂದರೆ ಸರಿ. ಇಲ್ಲಿಯವರೆಗೆ ನಮ್ಮ ಕುಟುಂಬದಲ್ಲಿ ಯಾವುದೇ ನೋಂದಾಯಿತ ಪಾಲು ವಿಭಾಗ ಆಗಿರುವುದಿಲ್ಲ.

**4 ನೇ ಪ್ರತಿವಾದಿ ಮತ್ತು ಅವರ ಪರ ವಕೀಲರು ಗೈರು ಹಾಜರಾಗಿದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರು ವಿಚಾರಣೆ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ, ನನ್ನ ಉಕ್ತಲೇಖನದಂತೆ, ಬೆರಳಚ್ಚು ಮಾಡಿಸಲಾಯಿತು.)**

ಓ. ಹೇ. ಕೇ. ಸರಿ ಅದೆ.

-ಸಹಿ-

ಹಿರಿಯ ದಿವಾಣಿ ನ್ಯಾಯಾಧೀಶರು, ರೋಣ.